## ಜನ-ಪದ

# ಎಂ.ಎಸ್. ಸಂಪತ್ತಯ್ಯಂಗಾರ್

ದೊಡ್ಡಬಳ್ಳಾಪುರದ ಎಂ.ಎಸ್. ಸಂಪತ್ತಯ್ಯಂಗಾರ್ ಅವರದು ಅಂತರ್ಜಲದಂತಹ ವ್ಯಕ್ತಿತ್ವ. ದೊಡ್ಡಬಳ್ಳಾಪುರ ಪುರಸಭೆಗೆ ಐದು ಬಾರಿ ಸದಸ್ಯರಾಗಿದ್ದ ಅವರು ಊರಿಗೆ ಉಪಕಾರಿ ಎನ್ನಿಸಿಕೊಂಡವರು. ಪರ್ತಕರ್ತರಾಗಿಯೂ ಕೆಲಸ ಮಾಡಿದ್ದ ಅವರು ನೈತಿಕತೆಯನ್ನು ಮಾತಿಗೆ ಸೀಮಿತಗೊಳಿಸಿಕೊಳ್ಳದೆ, ಆಚರಣೆಯ ರೂಪದಲ್ಲೂ ಬಾಳಲ್ಲಿ ಅಳವಡಿಸಿಕೊಂಡವರು.

ಕಳೆದ ನ. 21ರಂದು ಸಂಪತ್ತಯ್ಯಂಗಾರರು ನಿಧನರಾದಾಗ, ದೊಡ್ಡಬಳ್ಳಾಪುರದ ಹೊಸ ತಲೆಮಾರು ಸಾಮಾಜಿಕ ಜಾಲತಾಣಗಳಲ್ಲಿ ಅಜ್ಜನ ಗುಣಗಾನ ಮಾಡಿದ್ದರು. ತೊಂಬತ್ತೈದು ವರ್ಷದ ಹಿರಿಯ ನಾಗರಿಕರು ಹೊಸ ತಲೆಮಾರಿನ ಕೃತಜ್ಞತೆಗೆ ಪಾತ್ರವಾಗುವ, ಮಾದರಿ ಎನ್ನಿಸುವ ವಿರಳ ಉದಾಹರಣೆಯಿದು.



ಸಂಪತ್ತಯ್ಯಂಗಾರ್ ಸ್ವಾತಂತ್ರ್ಯಪೂರ್ವ ಕಾಲದವರು. ಸ್ವಾತಂತ್ರ್ಯ ಚಳವಳಿಯ ಕಥೆಗಳನ್ನು ಸ್ವಾರಸ್ಯಕರವಾಗಿ ಹೇಳುತ್ತಿದ್ದ, ಲಾವಣಿಗಳನ್ನು ಭಾವುಕರಾಗಿ ಹಾಡುತ್ತಿದ್ದ ಈ ಅಜ್ಜ, ಮಕ್ಕಳ ಬಗ್ಗೆ ವಿಶೇಷ ಒಲವುಳ್ಳವರಾಗಿದ್ದರು ಹಾಗೂ ದೊಡ್ಡಬಳ್ಳಾಪುರದ ಸಾಂಸ್ಕೃತಿಕ ಪರಿಸರದಲ್ಲಿ ಕ್ರಿಯಾಶೀಲರಾಗಿದ್ದರು. ಎಡತಾಕಿದ ಮಕ್ಕಳಿಗೆಲ್ಲ ಚಾಕೊಲೇಟ್ ನೀಡುತ್ತಿದ್ದ ಅಜ್ಜ, ಸಮಾಜಕ್ಕೆ ತಮ್ಮ ವ್ಯಕ್ತಿತ್ವ–ವಿಚಾರದ ಸಿಹಿ ಹಂಚುವವರಂತೆ ಕಾಣಿಸುತ್ತಿದ್ದರು.

ಅಡುಗೆ ಮತ್ತು ಸಂಗೀತ ಅಯ್ಯಂಗಾರರ ಆಸಕ್ತಿಯ ಕ್ಷೇತ್ರಗಳಾಗಿದ್ದವು. ಪ್ರತಿ ತಿಂಗಳೂ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದ ಅವರು, ನಾಡಿನ ಪ್ರಸಿದ್ಧ ಕಲಾವಿದರನ್ನು ತಮ್ಮೂರಿನ ಸಹೃದಯರಿಗೆ ಪರಿಚಯಿಸಿದ್ದ ಸಂಘಟಕ. 'ಸಾಂಪ್ರದಾಯಿಕ ಪಾಕಶಾಸ್ತ್ರ' ಹಾಗೂ 'ನಾಳೆ ತಿಂಡಿ ಏನು?' ಅವರ ಪ್ರಸಿದ್ಧ ಅಡುಗೆ ಕೃತಿಗಳು. ವೈಷ್ಣವ ಪರಂಪರೆಯ ಸಾಂಪ್ರದಾಯಿಕ ಅಡುಗೆಗಳ ಬಗೆಗಿನ 'ಸಾಂಪ್ರದಾಯಿಕ ಪಾಕಶಾಸ್ತ್ರ' ಕೃತಿಯಲ್ಲಿ ಕಲಾವಿದನ ಅಭಿರುಚಿ ಹಾಗೂ ಸಂಶೋಧಕನ ಕುತೂಹಲ ಹದವಾಗಿ ಬೆರೆತಿದ್ದವು. ಈ ಕೃತಿ ಇಂಗ್ಲಿಷ್‌ಗೂ ಅನುವಾದಗೊಂಡಿದೆ. 'ನಾಳೆ ತಿಂಡಿ ಏನು?' ಎಲ್ಲ ತಲೆಮಾರಿನವರ ದೈನಿಕಕ್ಕೆ ರುಚಿ ತಂದುಕೊಡಬಲ್ಲ ಪುಸ್ತಕ.

ಅಯ್ಯಂಗಾರರು ಸಂಪಾದಿಸಿದ್ದ 'ಮಣಿಮಾಲೆ', ದೊಡ್ಡಬಳ್ಳಾಪುರದ ಸಾಧಕರ ಕುರಿತ ಜ್ಞಾಪಕ ಚಿತ್ರಶಾಲೆ. 'ಸುಗುಣ ಕುಬೇರ ಮತ್ತು ಇತರ ಕಥೆಗಳು' ಅವರಿಗೆ ಹೆಸರು ತಂದುಕೊಟ್ಟ ಸೃಜನಶೀಲ ಕೃತಿ.

ಮರಣಾನಂತರ ಸಂಪತ್ತಯ್ಯಂಗಾರರ ದೇಹವನ್ನು ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಗಿದೆ. ಸಾಂಪ್ರದಾಯಿಕ ಕುಟುಂಬದ ವ್ಯಕ್ತಿಯೊಬ್ಬ ಸಮಾಜವನ್ನು ಒಳಗೊಳ್ಳುವ ಅತ್ಯುತ್ತಮ ಉದಾಹರಣೆ ಸಂಪತ್ತಯ್ಯಂಗಾರ್. ಅವರ ಜಾತ್ಯತೀತ ಬದುಕು ಮತ್ತು ಬರಹ, ಕನ್ನಡನಾಡಿನ 'ವಿವೇಕದ ಪರಂಪರೆ'ಯ ಪ್ರಾತಿನಿಧಿಕ ಮಾದರಿಯೂ ಹೌದು. ●